**O. S. No:03/2022**
**DW:1**

(ಇಂದು ದಿನಾಂಕಃ **18-08-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದಃ**

ಮೂಗಪ್ಪನಿಗೆ ಹುಚ್ಚಪ್ಪ ಮತ್ತು ಬಸವರಾಜ ಎನ್ನುವ ಇಬ್ಬರೂ ಸಹೋದರರು ಎಂದರೆ ಸರಿ. ಸದರಿಯವರ ನಡುವೆ ನೋಂದಾಯಿತ ಪಾಲು ವಿಭಾಗವಾಗಿಲ್ಲ ಎಂದರೆ ಸರಿ. ಕಾರಣ ದಾವಾ ಆಸ್ತಿಗಳಲ್ಲಿ ಸದರಿಯವರಿಗೆಲ್ಲಾ ಸಮನಾಗಿ 1/3 ಹಿಸ್ಸೆ ಇದೆ ಎಂದರೆ ಸರಿ. ಸದರಿ ಮೂಗಪ್ಪನ ಹಿಸ್ಸಾದಲ್ಲಿ ವಾದಿ, 1 ರಿಂದ 5 ನೇ ಪ್ರತಿವಾದಿಯವರಿಗೆ ಪಾಲು ಇರುತ್ತದೆ ಎಂದರೆ ಸಾಕ್ಷಿಯು 1 ರಿಂದ 5 ನೇ ಪ್ರತಿವಾದಿಯರಿಗೆ ಮಾತ್ರ ಪಾಲು ಇದ್ದು, ವಾದಿಗೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ಈ ಹಿಂದೆ ವಾದಿಯ ವಿರುದ್ಧ ಮೂಲ ದಾವಾ ಸಂಃ 19/2016 ನ್ನು ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ಮೂಗಪ್ಪ ಮೃತಪಟ್ಟ ನಂತರ ಸದರಿ ದಾವೆಯಲ್ಲಿ ನಾವು ವಾರಸ ನಾತೆಯಿಂದ ಸೇರ್ಪಡೆಯಾಗಿರುತ್ತವೆ ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಾಜರು ಪಡಿಸಿರುವ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ. ನಿಪಿ-19 ಇದು ಮೂಗಪ್ಪ ರವರ ಮದುವೆ ಆಮಂತ್ರಣ ಪತ್ರಿಕೆ ಎಂದರೆ ಸರಿ ಆದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆಯ ಮದುವೆಯ ಜೊತೆ ಮಲ್ಲಪ್ಪ, ಸಣ್ಣಫಕ್ಕೀರಪ್ಪ ಹಾಗೂ ಮಹಾದೇವಪ್ಪ ರವರ ವಿವಾಹಗಳೂ ಸಹ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ-19 ನ್ನು ನನ್ನ ಅಜ್ಜ ಚೆನ್ನಪ್ಪ ಹಾಗೂ ಮಲ್ಲವ್ವ ಹಾಕಿಸಿರುತ್ತಾರೆ ಎಂದರೆ ಸರಿ. ವಾದಿ ಮೂಗಪ್ಪನ ಹೆಂಡತಿಯಾಗಿದ್ದರೂ ಸಹ ನಾನು ವಾದಿ ನನಗೆ ಪರಿಚಯವಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಒಬ್ಬ ಮಲ್ಲಪ್ಪ ನಿಂಗಪ್ಪ ಕಿರೇಸೂರ, ಸಣ್ಣಫಕ್ಕೀರಪ್ಪ ಬಸಪ್ಪ ಗೊಳಗೊಳಕಿ ರವರ ಪರಿಚಯವಿದೆ. ಸದರಿ ಸಣ್ಣಫಕ್ಕೀರಪ್ಪ ನವರು ನಮ್ಮ ಬೀಗರು ಎಂದರೆ ಸರಿ. ಸದರಿಯವರ ಮದುವೆ ಮೂಗಪ್ಪ ರವರ ಮದುವೆಯ ಜೊತೆ ಆಗಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು

ನುಡಿದಿರುತ್ತಾರೆ. ವಾದಿಗೆ ಆಸ್ತಿ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**